**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.278/2021

**PW**. 16

**CW**. 32

**ಸಾಕ್ಷಿಯ ಹೆಸರು –ಗಣೇಶ ಜಿ ಹೆಚ್**

**ತಂದೆಯ ಹೆಸರು –ಹನುಮೇಗೌಡ**

**ವಯಸ್ಸು –43 ವರ್ಷಗಳು** ದಿನಾಂಕ 06–03–2026 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಪಿ ಐ , ಸಂಚಾರಿ ಪೊಲೀಸ್ ಠಾಣೆ ಕುಮಾರ ಸ್ವಾಮಿ ಲೇಔಟ್ ಬೆಂಗಳೂರು**

**ವಾಸಸ್ಥಳ – ಬೆಂಗಳೂರು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ನಾನು ದಿಃ 04–10–2018 ರಿಂದ ದಿಃ 03–10–2020 ರವರೆಗೆ ಪಿ ಎಸ್ ಐ ಆಗಿ ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸಿರುತ್ತೇನೆ.

ದಿಃ 13–11–2019 ರಂದು ಬೆಳಗ್ಗೆ 6.00 ಗಂಟೆಗೆ ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಯಿಂದ ಕರೆ ಬಂದಿದ್ದು , ಬೆಳಗ್ಗೆ 6.10 ಗಂಟೆ ಆಸ್ಪತ್ರೆಗೆ ಹೋಗಿ ಎಂ ಎಲ್ ಮೆಮೋ ಸ್ವೀಕರಿಸಿ , ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಚಾಸಾ–1 ರವರ ಹೇಳಿಕೆಯನ್ನು ವೈದ್ಯರ ಸಮಕ್ಷಮ ಬೆಳಗ್ಗೆ 6.30 ರಿಂದ 7.30 ರವರೆಗೆ ಪಡೆದು ನಂತರ ಠಾಣೆಗೆ ಬಂದು ಬೆಳಗ್ಗೆ 7.45 ಗಂಟೆಗೆ ಠಾಣಾ ಮೊ ಸಂ 214/2019 ರಂತೆ ಪ್ರಕರಣ ದಾಖಲು ಮಾಡಿಕೊಂಡು ಪ್ರ ವ ವ ಯನ್ನು ನ್ಯಾಯಾಲಯಕ್ಕೆ ಮತ್ತು ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿರುತ್ತೇನೆ. ನಾನು ಸ್ವೀಕರಿಸಿದ ಎಂ ಎಲ್ ಸಿ ಮೆಮೋ ವನ್ನು ಈಗ ನೋಡುತ್ತಿದ್ದು , ನಿಪಿ–23 ಎಂದು ಗುರುತಿಸಲಾಯಿತು. ಸದರಚಾಸಾ–1 ರವರಿಂ ಪಡೆದ ಹೇಳಿಕೆಯನ್ನು ಈಗಾಲೇ ನಿಪಿ– 1 ಎಂದು ಗುರುತಿಸಿದ್ದು , ಸಾಕ್ಷಿಯಿ ಸಹಿಯನ್ನು ನಿಪಿ–

1(ಬಿ) ಎಂದು ಗುರುತಿಸಲಾಯಿತು. ಪ್ರ ವ ವಯನ್ನು ನಿಪಿ–24 ಎಂದು , ಸಾಕ್ಷಿಯ ಸಹಿಯನ್ನು ನಿಪಿ–24(ಎ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಆರೋಪಿತರ ಪತ್ತೆಗಾಗಿ ಚಾಸಾ–29 ರಿಂದ 31 ರವರನ್ನು ನೇಮಕ ಮಾಡಿದ್ದು , ಸದರಿಯವರು ಚಿಕ್ಕಬ್ಯಾಲಾಳು ಗ್ರಾಮದಲ್ಲಿ ಮೂರು ಜನ ಆರೋಪಿತರನ್ನು ವಶಪಡಿಸಿಕೊಂಡು ಠಾಣೆಗೆ ಕರೆತಂದು ನನ್ನ ಮುಂದೆ ಹಾಜರು ಮಾಡಿದ್ದಾರೆ. ಮೂರು ಜನ ಆರೋಪಿತರನ್ನು ವಿಚಾರಣೆ ಮಾಡಿ, 1 ನೇ ಆರೋಪಿಯು ಕೃತ್ಯ ನಡೆದ ಸಮಯದಲ್ಲಿ ಧರಿಸಿದ್ದ ಒಂದು ಟೀಶರ್ಟ, 2 ನೇ ಆರೋಪಿಯು ಕೃತ್ಯ ನಡೆದ ಸಮಯದಲ್ಲಿ ಧರಿಸಿದ್ದ ಒಂದು ಶರ್ಟ , 3 ನೇ ಆರೋಪಿಯು ಕೃತ್ಯ ನಡೆದ ಸಮಯದಲ್ಲಿ ಧರಿಸಿದ್ದ ಒಂದು ಶರ್ಟ ಗಳನ್ನು ಜಪ್ತಿ ಮಾಡಿ ಚಾಸಾ–12 ಮತ್ತು 13 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ನಿಪಿ–25 ಎಂದು, ಸಾಕ್ಷಿಯ ಸಹಿಯನ್ನು ನಿಪಿ–25(ಎ) ಎಂದು, ಆರೋಪಿತರ ಸಹಿಗಳನ್ನು ನಿಪಿ–25(ಬಿ), 25(ಸಿ) ಹಾಗೂ 25(ಡಿ) ಎಂದು ಗುರುತಿಸಲಾಯಿತು. ಆರೋಪಿತರ ಮೂರು ಶರ್ಟ ಗಳನ್ನು ಈಗ ನ್ಯಾಯಾಲಯದ ಮುಂದೆ ತೆರೆದು ನೋಡಲಾಗಿ ಅವುಗಳನ್ನು ಮು.ಮಾ–8 ರಿಂದ 10 ಎಂದು ಗುರುತಿಸಲಾಯಿತು.

ಅದೇ ದಿನ ಮಧ್ಯಾಹ್ನ 2.00 ರಿಂದ 3.00 ವರೆಗೆ ಚಾಸಾ–5 ಸ್ಥಳ ತೋರಿಸಿದ ಮೇರೆಗೆ ಚಾಸಾ–14 ಮತ್ತು 15 ರವರ ಸಮಕ್ಷಮ ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆ ಮಾಡಿ, ಸ್ಥಳದಲ್ಲಿದ್ದ ರಕ್ತಸಿಕ್ತ ಮಣ್ಣು , ಸಾದಾ ಮಣ್ಣು , ಚಾಸಾ–5 ರವರು ಹಾಜರು ಮಾಡಿದ ಒಂದು ಕತ್ತಿ, ಒಂದು ಕಾಡುಜಾತಿಯ ದೊಣ್ಣೆ , ರಕ್ತಕಲೆಯಿರುವ ಬಿದಿರು ದೊಣ್ಣೆ ಗಳನ್ನು ಜಪ್ತಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ–2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ಮೇಲೆ ಹೇಳಿದ ವಸ್ತುಗಳನ್ನು ಈಗಾಗಲೇ ಮುಮಾ–1

ರಿಂದ 3 , 6 ಮತ್ತು 7 ಎಂದು ಗುರುತಿಸಲಾಗಿದೆ. ಅದೇ ದಿನ ಚಾಸಾ–4 ರಿಂದ 11, 27, 29 ಹಾಗೂ 30 ರವರ ಹೇಳಿಕೆ ಪಡೆದಿದ್ದೇನೆ. ಅದೇ ದಿನ ಚಾಸಾ–1 ಮತ್ತು 2 ರವರ ರಕ್ತದ ಗುಂಪನ್ನು ಪರೀಕ್ಷೆ ಮಾಡಿಕೊಡಲು ಮನವಿ ಸಲ್ಲಿಸಿದ್ದೇನೆ.

ದಿಃ 15–11–2019 ರಂದು ಚಾಸಾ–6 ಹಾಜರು ಮಾಡಿದ ಗಾಯಾಳು ಚಾಸಾ–1 ಮತ್ತು 2 ರವರ ಕೃತ್ಯದ ಸಮಯದಲ್ಲಿ ಧರಿಸಿದ್ದ ರಕ್ತಸಿಕ್ತ ಬನಿಯನ್ , ಒಂದು ಸ್ವೆಟರ್ ಗಳನ್ನು ಜಪ್ತಿ ಮಾಡಿ , ಚಾಸಾ–16 ಮತ್ತು 17 ರವರ ಸಮಕ್ಷಮ ಬೆಳಗ್ಗೆ 10.30 ರಿಂದ 11.15 ವರೆಗೆ ಪಂಚನಾಮೆ ಮಾಡಿರುತ್ತೇನೆ. ಈಗಾಗಲೇ ನಿಪಿ–21 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–21(ಬಿ) ಎಂದು ಗುರುತಿಸಲಾಯಿತು. ಮೇಲೆ ಹೇಳಿದ ಬಟ್ಟೆಗಳನ್ನು ಈಗಾಗಲೇ ಮು.ಮಾ–4 ಮತ್ತು 5 ಎಂದು ಗುರುತಿಸಲಾಗಿದೆ.

ಸ್ಥಳ ಪಂಚನಾಮೆ ಕಾಲಕ್ಕೆ ತೆಗೆದ ಫೋಟೋಗಳನ್ನು ಈಗಾಗಲೇ ನಿಪಿ–3 ಮತ್ತು 4 ಎಂದು ಗುರುತಿಸಲಾಗಿದೆ. ಆ ಬಗ್ಗೆ ಚಾಸಾ–18 ರವರಿಂದ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಸೇರಿಸಿಕೊಂಡಿದ್ದೇನೆ. ಅದನ್ನು ಈಗಾಗಲೇ ನಿಪಿ–8 ಎಂದು ಗುರುತಿಸಲಾಗಿದೆ.

ದಿಃ 17–11–2019 ರಂದು ಮುದ್ದೆಮಾಲುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ನಮ್ಮ ಸಿಬ್ಬಂದಿ ಮೂಲಕ ಕಳುಹಿಸಿರುತ್ತೇನೆ.

ದಿಃ 26–11–2019 ರಂದು ಚಾಸಾ–3 ಹೇಳಿಕೆ ಕೊಡುವ ಸ್ಥಿತಿಯಲಿಲ್ಲ ಎಂದು ಆಸ್ಪತ್ರೆಯಿಂದ ವರದಿ ನೀಡಿದ್ದಾರೆ.

ದಿಃ 15–12–2019 ರಂದು ಚಾಸಾ–9, 10, 18 ಹಾಗೂ 2 ರವರ ಹೇಳಿಕೆ ಪಡೆದಿದ್ದೇನೆ.

ದಿಃ 27–12–2019 ರಂದು ಚಾಸಾ–3 ರವರ ಕೇಸ್ ಶೀಟ್ ಅನ್ನು ಪಡೆದಿದ್ದು , ಆ ಪೈಕಿ ಡಿಸಾರ್ಜ ಸಮರಿಯನ್ನು ಈಗಾಗಲೇ ನಿಪಿ–12 ಎಂದು ಗುರುತಿಸಲಾಗಿದೆ.

ದಿಃ 05-01-2020 ರಂದು ಗಾಯಾಳುಗಳ ಗಾಯದ ಪ್ರಮಾಣ ಪತ್ರವನ್ನು ಆಸ್ಪತ್ರೆಯಿಂದ ಪಡೆದಿರುತ್ತೇನೆ. ಅವುಗಳನ್ನು ಈಗಾಗಲೇ ನಿಪಿ-14, 15 ಮತ್ತು 17 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಗಳನ್ನು 14(ಬಿ), 15(ಬಿ) ಹಾಗೂ 17(ಬಿ) ಗುರುತಿಸಲಾಗಿದೆ.

ದಿಃ 25-03-2020 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರ್ ಎಫ್ ಎಸ್ ಎಲ್ ವರದಿ ಪಡೆದು ಕಡತಕ್ಕೆ ಸೇರಿಸಿಕೊಂಡಿದ್ದೇನೆ. ಅದನ್ನು ಈಗ ನೋಡುತ್ತಿದ್ದು , ನಿಪಿ-26 ಎಂದು ಸಾಕ್ಷಿಯ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು.

ದಿಃ 24-07-2020 ರಂದು ಕೃತ್ಯ ನಡೆದ ಸ್ಥಳದ ಬಗ್ಗೆ ವರದಿ ಕೇಳಿ ಮನವಿ ಸಲ್ಲಿಸಿದ್ದು ದಿಃ 07-09-2020 ರಂದು ಆ ಬಗ್ಗೆ ಪಂಚಾಯಿತಿಯವರು ವರದಿ ನೀಡಿದ್ದಾರೆ. ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು 10(ಬಿ) ಎಂದು ಗುರುತಿಸಲಾಗಿದೆ.

ದಿಃ 27-07-2020 ರಂದು ಕೃತ್ಯ ನಡೆದ ಸ್ಥಳದ ನಕ್ಷೆ ಕೋರಿ ಪಿಡಬ್ಲ್ಯೂಯ ಡಿ ಇಲಾಖೆ ಯವರಿಗೆ ಮನವಿ ಸಲ್ಲಿಸಿದ್ದು, ದಿಃ 07-09-2020 ರಂದು ಪಿಡಬ್ಲ್ಯೂಡಿಯವರು ನಕ್ಷೆ ತಯಾರಿಸಿ ನೀಡಿದ್ದು, ಅದನ್ನು ಈಗಾಗಲೇ ನಿಪಿ-7 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಗಳನ್ನು 7(ಸಿ) ಗುರುತಿಸಲಾಗಿದೆ.

ಅದೇ ದಿನ ಕೃತ್ಯ ನಡೆದ ಸಮಯದಲ್ಲಿ ವಿದ್ಯುತ್ ಇದ್ದ ಬಗ್ಗೆ ಚೆಸ್ ಕಾಂ ಇಲಾಖೆಯವರಿಗೆ ಮನವಿ ಸಲ್ಲಿಸಿದ್ದು, ಅದೇ ದಿನ ಆ ಬಗ್ಗೆ ವರದಿ ನೀಡಿದ್ದು, ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ-1 ರಿಂದ 3 ರವರಿಗೆ ಆದ ಗಾಯದ ಬಗ್ಗೆ ಎರಡು ಹೆಚ್ಚುವರಿ ಅಭಿಪ್ರಾಯ ವರದಿ ಪಡೆದು ಕಡತಕ್ಕೆ ಸೇರಿಸಿಕೊಂಡಿದ್ದೇನೆ. ಅವುಗಳನ್ನು ಈಗಾಗಲೇ ನಿಪಿ-19 ಮತ್ತು 20

ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-19(ಬಿ) ಮತ್ತು 20(ಬಿ)ಎಂದು ಗುರುತಿಸಲಾಯಿತು.

ದಿಃ 24-02-2020 ರಂದು ಚಾಸಾ-3 ರವರ ಹೇಳಿಕೆ ಪಡೆದಿದ್ದೇನೆ.

ನಂತರ ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾದಾರಗಳು ಇದ್ದ ಕಾರಣ ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ.

ಫ್ರಾಸಾ-4 ನಿಪಿ-5 ರಂತೆ ನನ್ನ ಸಮಕ್ಷಮ ಹೇಳಿಕೆ ನೀಡಿದ್ದಾರೆ.

**ಪಾಟೀಸವಾಲುಃ- ಆರೋಪಿತರ ಪರ ಶ್ರೀ ಎಸ್ ಪಿ ವಕೀಲರಿಂದಃ-**

ಆರೋಪಿತರು ಮತ್ತು ಫಿರ್ಯಾದುದಾರರ ನಡುವೆ ಸಿವಿಲ್ ವ್ಯಾಜ್ಯ ಇಲ್ಲ ಎಂದು ಕಂಡುಬಂತು ಎಂದರೆ ಸರಿ . ಕೃತ್ಯ ನಡೆದ ಸ್ಥಳದ ಅಕ್ಕಪಕ್ಕದಲ್ಲಿ ವಾಸದ ಮನೆಗಳು ಇವೆ ಎಂದರೆ ಸರಿ . ಸ್ಥಳೀಯ ಸಾಕ್ಷಿದಾರರನ್ನು ಪಂಚರನ್ನು ಒದಗಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಘಟನೆಯು ಬ್ಯಾರೇನ್ ಮನೆಯಲ್ಲಿ ನಡೆದಿದೆ ಎಂದರೆ ಸರಿಯಲ್ಲ. ಮಚ್ಚು, ರಾಡು ಮತ್ತು ಕತ್ತಿ ಬೇರೆ ಬೇರೆ ಆಯುಧಗಳು ಎಂದರೆ ಸರಿ. ಬೃಂದಾವನ ಆಸ್ಪತ್ರೆಯಿಂದ ಕೇಸ್ ಶೀಟ್ ಅನ್ನು ಪರಿಶೀಲನೆ ಮಾಡಿದ್ದೇನೆ. ಚಾಸಾ-3 ಆಸ್ಪತ್ರೆಯಲ್ಲಿ ಐರಾನ್ ರಾಡಿನಿಂದ ಗಾಯಗೊಂಡಿದ್ದೇನೆ ಎಂದು ಹೇಳಿದರು ಎಂದರೆ ಸರಿಯಲ್ಲ. ಗಾಯಾಳುಗಳು ಪಿರಿಯಾಪಟ್ಟಣ ಆಸ್ಪತ್ರೆಯಿಂದ ಚಿಕಿತ್ಸೆ ಪಡೆಯದಿದ್ದರೂ ಕೂಡ ಗಾಯದ ಪ್ರಮಾಣ ಪತ್ರಗಳನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ.

ಆಸ್ಪತ್ರೆಯಲ್ಲಿ ವೈದ್ಯರ ಸಮಕ್ಷಮ ಚಾಸಾ-1 ರವರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಪತ್ತೆಗಾಗಿ ಯಾವುದೇ ಕ್ರಮಕೈಗೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಬಟ್ಟೆಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಿ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ.

ಚಾಸಾ–5 ರವರು ಕೃತ್ಯ ನಡೆದ ಸ್ಥಳ ತೋರಿಸಿಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆ ಮಾಡಿಲ್ಲ ಮತ್ತು ರಕ್ತಸಿಕ್ತ ಮಣ್ಣು , ಸಾದಾ ಮಣ್ಣು , ಕತ್ತಿ , ದೂಣ್ಣೆ ಹಾಗೂ ಬಿದಿರು ದೊಣ್ಣೆಗ್ಗಳನ್ನು ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಅವರ ಹೇಳಿಕೆಯಂತೆ ಪಡೆದಿಲ್ಲ ಎಂದರೆ ಸರಿಯಲ್ಲ.

ಚಾಸಾ–1 ಮತ್ತು 2 ರವರ ಬಟ್ಟೆಗಳನ್ನು ರಕ್ತಸಿಕ್ತ ಬಟ್ಟೆಗಳನ್ನು ಜಪ್ತಿ ಮಾಡಿಲ್ಲ ಎಂದರೆ ಸರಿಯಲ್ಲ. ಫೋಟೋಗಳನ್ನು, ಸಿಡಿಯನ್ನು ಹಾಗೂ ಕಲಂ 65 ಬಿ ಪ್ರಮಾಣ ಪತ್ರವನ್ನು ನಮ್ಮ ಅನೂಕೂಲಕ್ಕೆ ತಕ್ಕಂತೆ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ–3 ಹೇಳಿಕೆ ಕೊಡುವ ಸ್ಥಿತಿಯಲಿಲ್ಲ ಎಂದು ಆಸ್ಪತ್ರೆಯವರು ವರದಿ ನೀಡಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–3 ರವರ ಡಿಸಾರ್ಜ ಸಮರಿಯನ್ನು ಹಾಗೂ ಆರ್ ಎಫ್ ಎಸ್ ಎಲ್ ವರದಿಯನ್ನು ಈ ಪ್ರಕರಣಕ್ಕೆ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಕ್ಷೆ ಹಾಗೂ ಚೆಸ್ ಕಾಂ ವರದಿಯನ್ನು ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಮತ್ತು ಫಿರ್ಯಾದುದಾರರ ಬೇರೆ ಬೇರೆ ಪಕ್ಷದ ಕಾರ್ಯಕರ್ತರು ಎಂದು ತನಿಖೆ ಸಮಯದಲ್ಲಿ ಗೊತ್ತಾಯಿತು ಎಂದರೆ ಸರಿಯಲ್ಲ. ಚಾಸಾ–3 ರವರು ಬ್ಯಾರೇನ್ ಮನೆಯಲ್ಲಿದ್ದಾಗ ಮೇಲಿಂದ ಕಬ್ಬಿಣದ ರಾಡು ಬಿದ್ದು ಗಾಯಗೊಂಡಿದ್ದಾರೆ ಎಂದು ತನಿಖೆ ಸಮಯದಲ್ಲಿ ಗೊತ್ತಾಯಿತು ಎಂದರೆ ಸರಿಯಲ್ಲ. ಚಾಸಾ–1 ಮತ್ತು 2 ರವರಿಗೂ ಬ್ಯಾರೇನ್ ಮನೆಯಲ್ಲಿದ್ದಾಗ ಗಾಯಗೊಂಡಿದ್ದಾರೆ ಎಂದು ತನಿಖೆ ಸಮಯದಲ್ಲಿ ಗೊತ್ತಾಯಿತು ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸಾಕ್ಷಗಳು ಇಲ್ಲದಿದ್ದರೂ ಕೂಡ ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.